**All India Radio: Bangalore**
**National Bulletin In Kannada**
**03.08.2024 09.05AM**

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
*******

ಮುಖ್ಯಾಂಶಗಳು:

- ನವದೆಹಲಿಯಲ್ಲಿಂದು ಕೃಷಿ ಅರ್ಥಶಾಸ್ತ್ರಜ್ಞರ ೩೨ನೇ ಅಂತಾರಾಷ್ಟ್ರೀಯ ಸಮ್ಮೇಳನ - ಪ್ರಧಾನಿ ಅವರಿಂದ ಉದ್ಘಾಟನೆ
- ಕೇರಳದ ವಯನಾಡಿನಲ್ಲಿ ೩೦೦ಕ್ಕೂ ಹೆಚ್ಚು ಜನರ ಸಾವು; ಮುಂದುವರಿದ ಶೋಧ ಕಾರ್ಯಾಚರಣೆ
- ೨೦೨೪-೨೫ರ ಜುಲೈ ೩೧ರ ವರೆಗೆ ದಾಖಲೆಯ ಏಳು ಕೋಟಿ ೨೮ ಲಕ್ಷ ಆದಾಯ ತೆರಿಗೆ ಮರು ಪಾವತಿ - ಕೇಂದ್ರ ಹಣಕಾಸು ಸಚಿವಾಲಯ
- ಪ್ಯಾರಿಸ್ ಒಲಿಂಪಿಕ್ಸ್: ಇಂದು ಪದಕದ ನಿರೀಕ್ಷೆಯಲ್ಲಿ ಭಾರತದ ಕ್ರೀಡಾಪಟುಗಳು

**********

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಇದೇ ೫ ರಿಂದ ೧೦ ರವರೆಗೆ ಫಿಜಿ, ನ್ಯೂಜಿಲೆಂಡ್ ಮತ್ತು ಟಿಮೋರ್-ಲೆಸ್ಟೆಗೆ ಪ್ರವಾಸ ಕೈಗೊಳ್ಳಲಿದ್ದಾರೆ. ನಿನ್ನೆ ದೆಹಲಿಯಲ್ಲಿ ಮಾಧ್ಯಮಗಳಿಗೆ ಈ ಕುರಿತು ಮಾಹಿತಿ ನೀಡಿದ ಕಾರ್ಯದರ್ಶಿ ಜೈದೀಪ್ ಮಜುಂದಾರ್, ಫಿಜಿ ಮತ್ತು ಟಿಮೋರ್ ಲೆಸ್ಟೆಗೆ ಭಾರತದ ರಾಷ್ಟ್ರಪತಿಯೊಬ್ಬರ ಮೊದಲ ಭೇಟಿ ಇದಾಗಿದೆ ಎಂದು ಹೇಳಿದರು. ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಆಕ್ಟ್ ಈಸ್ಟ್ ನೀತಿಯನ್ನು ಘೋಷಿಸಿದಾಗಿನಿಂದ, ಆಗ್ನೇಯ ಏಷ್ಯಾ ಮತ್ತು ಪೆಸಿಫಿಕ್ ಪ್ರದೇಶಗಳು ಭಾರತಕ್ಕೆ ವಿಶೇಷ ಗಮನ ನೀಡುತ್ತಿದೆ. ಈ ಮೂರೂ ದೇಶಗಳು ಆಕ್ಟ್ ಈಸ್ಟ್ ನೀತಿಯೊಳಗೆ ಬರುತ್ತವೆ ಎಂದು ಅವರು ತಿಳಿಸಿದರು. ರಾಷ್ಟ್ರಪತಿ ಮುರ್ಮು ಇದೇ ೫ ರಿಂದ ೭ ರವರೆಗೆ ತಮ್ಮ ಭೇಟಿಯ ಮೊದಲ ಹಂತದಲ್ಲಿ ಫಿಜಿಗೆ ಭೇಟಿ ನೀಡಲಿದ್ದಾರೆ. ಫಿಜಿಯಲ್ಲಿ ಭಾರತ ೭೫ ವರ್ಷಗಳ ರಾಜತಾಂತ್ರಿಕ ಉಪಸ್ಥಿತಿಯನ್ನು ಪೂರ್ಣಗೊಳಿಸಿದೆ ಎಂದು ಕಾರ್ಯದರ್ಶಿ ಹೇಳಿದರು. ಈ ಸಮಯದಲ್ಲಿ, ರಾಷ್ಟ್ರಪತಿ ಅವರು ಫಿಜಿ ಅಧ್ಯಕ್ಷ ಕಟೋನಿವೆರೆ ಮತ್ತು ಪ್ರಧಾನ ಮಂತ್ರಿ ಸಿತಿವೇನಿ ರಬುಕಾ ಅವರೊಂದಿಗೆ ದ್ವಿಪಕ್ಷೀಯ ಸಭೆಗಳನ್ನು ನಡೆಸಲಿದ್ದಾರೆ. ಅಲ್ಲದೇ ಅವರು, ಫಿಜಿಯನ್ ಸಂಸತ್ತನ್ನು ಉದ್ದೇಶಿಸಿ ಮಾತನಾಡಲಿದ್ದಾರೆ ಮತ್ತು ಅಲ್ಲಿನ ಭಾರತೀಯ ವಲಸಿಗರೊಂದಿಗೆ ಸಂವಾದ ನಡೆಸಲಿದ್ದಾರೆ. ಭಾರತ ಫಿಜಿಯ ಪ್ರಬಲ ಅಭಿವೃದ್ಧಿ ಪಾಲುದಾರನಾಗಿದೆ. ರಾಷ್ಟ್ರಪತಿ ಅವರು ತಮ್ಮ ಪ್ರವಾಸದ ಎರಡನೇ ಚರಣದಲ್ಲಿ ಇದೇ ೮ ಮತ್ತು ೯ ರಂದು ನ್ಯೂಜಿಲೆಂಡ್‌ಗೆ ಭೇಟಿ ನೀಡಲಿದ್ದಾರೆ. ಈ ಸಮಯದಲ್ಲಿ ಅವರು ಗವರ್ನರ್ ಜನರಲ್ ಸಿಂಡಿಕಿರೊ ಅವರೊಂದಿಗೆ ದ್ವಿಪಕ್ಷೀಯ ಸಭೆ ನಡೆಸಲಿದ್ದಾರೆ ಮತ್ತು ಪ್ರಧಾನಮಂತ್ರಿ ಕ್ರಿಸ್ಟೋಫರ್ ಲುಕ್ಸನ್ ಅವರನ್ನು ಭೇಟಿಯಾಗಲಿದ್ದಾರೆ ಎಂದು ಕಾರ್ಯದರ್ಶಿ ತಿಳಿಸಿದ್ದಾರೆ.ರಾಷ್ಟ್ರಪತಿ ಮುರ್ಮು ಅವರು ವೆಲ್ಲಿಂಗ್ಟನ್‌ನಲ್ಲಿ ಅಂತಾರಾಷ್ಟ್ರೀಯ ಶಿಕ್ಷಣ

ಸಮ್ಮೇಳನವನ್ನು ಉದ್ದೇಶಿಸಿ ಮತ್ತು ಆಕ್ಲೆಂಡ್‌ನಲ್ಲಿ ಭಾರತೀಯ ವಲಸೆಗಾರರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ರಕ್ಷಣಾ ಮತ್ತು ಭದ್ರತಾ ವಲಯದಲ್ಲಿ ಭಾರತವನ್ನು, ಪ್ರಮುಖ ಪಾಲುದಾರ ರಾಷ್ಟ್ರವಾಗಿ ನ್ಯೂಜಿಲೆಂಡ್ ಗುರುತಿಸುತ್ತದೆ ಎಂದು ಮಜುಂದಾರ್ ಹೇಳಿದರು.  ತಮ್ಮ ಪ್ರವಾಸದ ಕೊನೆಯ ಹಂತದಲ್ಲಿ, ರಾಷ್ಟ್ರಪತಿ ದ್ರೌಪತಿ ಮುರ್ಮು ಇದೇ ೧೦ ರಂದು ಟಿಮೋರ್-ಲೆಸ್ಟೆಗೆ ಭೇಟಿ ನೀಡಲಿದ್ದಾರೆ ಮತ್ತು ಅಧ್ಯಕ್ಷ ಜೋಸ್ ರಾಮೋಸ್-ಹೊರ್ಟಾ ಅವರೊಂದಿಗೆ ದ್ವಿಪಕ್ಷೀಯ ಸಭೆ ನಡೆಸಲಿದ್ದಾರೆ. ಟಿಮೋರ್-ಲೆಸ್ಟೆಯ ಪ್ರಧಾನಮಂತ್ರಿ, ಕೇ ರಾಲಾ "ಕ್ಸಾನಾನಾ" ಗುಸ್ಮಾವೊ ಅವರನ್ನು ರಾಷ್ಟ್ರಪತಿ ಭೇಟಿಯಾಗಲಿದ್ದಾರೆ. ಭಾರತ, ನ್ಯೂಜಿಲೆಂಡ್‌ನೊಂದಿಗೆ ಬಲವಾದ ಪಾಲುದಾರಿಕೆ ಹೊಂದಿದೆ ಎಂದು ಕಾರ್ಯದರ್ಶಿ ಹೇಳಿದರು. ಟಿಮೋರ್‌ಲೆಸ್ಟೆ, ಆಸಿಯಾನ್‌ನ ೧೧ನೇ ಸದಸ್ಯನಾಗಲಿದೆ. ಫಿಜಿಯೊಂದಿಗೆ ಕೂಡ ಭಾರತ ಬಲವಾದ ಸಂಬಂಧ ಹೊಂದಿದೆ ಎಂದು ಮಜುಂದಾರ್ ಹೇಳಿದ್ದಾರೆ.

**********

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ನವದೆಹಲಿಯಲ್ಲಿಂದು ಕೃಷಿ ಅರ್ಥಶಾಸ್ತ್ರಜ್ಞರ ೩೨ ನೇ ಅಂತಾರಾಷ್ಟ್ರೀಯ ಸಮ್ಮೇಳನವನ್ನು ಉದ್ಘಾಟಿಸಲಿದ್ದಾರೆ. ೬೫ ವರ್ಷಗಳ ನಂತರ ಭಾರತದಲ್ಲಿ ಈ ಸಮ್ಮೇಳನ ನಡೆಯುತ್ತಿದೆ. ಆರು ದಿನಗಳ ತ್ರೈವಾರ್ಷಿಕ ಅಂತಾರಾಷ್ಟ್ರೀಯ ಕೃಷಿ ಅರ್ಥಶಾಸ್ತ್ರಜ್ಞರ ಸಂಘ ಆಯೋಜಿಸಿರುವ ಈ ಸಮ್ಮೇಳನದ ವಿಷಯ ಸುಸ್ಥಿರ ಕೃಷಿ-ಆಹಾರ ವ್ಯವಸ್ಥೆಗಳತ್ತ ಪರಿವರ್ತನೆಯಾಗಿದೆ. ಹವಾಮಾನ ಬದಲಾವಣೆ, ನೈಸರ್ಗಿಕ ಸಂಪನ್ಮೂಲಗಳ ಅವನತಿ, ಹೆಚ್ಚುತ್ತಿರುವ ಉತ್ಪಾದನಾ ವೆಚ್ಚಗಳು ಮತ್ತು ಸಂಘರ್ಷಗಳಂತಹ ಜಾಗತಿಕ ಸವಾಲುಗಳ ನಡುವೆ ಸುಸ್ಥಿರ ಕೃಷಿಯ ಅಗತ್ಯವನ್ನು ನಿಭಾಯಿಸುವ ಗುರಿಯನ್ನು ಇದು ಹೊಂದಿದೆ. ಸಮ್ಮೇಳನವ, ಜಾಗತಿಕ ಕೃಷಿ ಸವಾಲುಗಳಿಗೆ ಭಾರತದ ಪೂರ್ವಭಾವಿ ವಿಧಾನವನ್ನು ಎತ್ತಿ ತೋರಿಸುತ್ತದೆ ಮತ್ತು ಕೃಷಿ ಸಂಶೋಧನೆ ಮತ್ತು ನೀತಿಯಲ್ಲಿ ರಾಷ್ಟ್ರದ ಪ್ರಗತಿಯ ಧ್ಯೋತಕವಾಗಿದೆ. ಈ ಸಮ್ಮೇಳನ, ಸಂಶೋಧನಾ ಸಂಸ್ಥೆಗಳು ಮತ್ತು ವಿಶ್ವವಿದ್ಯಾನಿಲಯಗಳ ನಡುವಿನ ಪಾಲುದಾರಿಕೆಯನ್ನು ಬಲಪಡಿಸುವ ಗುರಿ ಹೊಂದಿದೆ, ರಾಷ್ಟ್ರೀಯ ಮತ್ತು ಜಾಗತಿಕ ಮಟ್ಟದಲ್ಲಿ ನೀತಿ ರಚನೆಯ ಮೇಲೆ ಪ್ರಭಾವ ಬೀರಲಿರುವ ಸಮ್ಮೇಳನ, ಡಿಜಿಟಲ್ ಕೃಷಿ ಮತ್ತು ಸುಸ್ಥಿರ ಕೃಷಿ-ಆಹಾರ ವ್ಯವಸ್ಥೆಗಳಲ್ಲಿನ ಪ್ರಗತಿ ಸೇರಿದಂತೆ ಭಾರತದ ಕೃಷಿ ಪ್ರಗತಿಯನ್ನು ಪ್ರದರ್ಶಿಸುತ್ತದೆ. ಸಮ್ಮೇಳನದಲ್ಲಿ ೭೫ ದೇಶಗಳಿಂದ ಸುಮಾರು ಒಂದು ಸಾವಿರ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

**********

ಕೇರಳದ ವಯನಾಡಿನಲ್ಲಿ ಉಂಟಾಗಿರುವ ಭೂಕುಸಿತಕ್ಕೆ ಸಂಬಂಧಿಸಿದಂತೆ ಶೋಧ ಕಾರ್ಯಾಚರಣೆ ಇಂದೂ ಮುಂದುವರಿಯಲಿದೆ.  ಸಶಸ್ತ್ರ ಪಡೆಗಳು, ಎನ್‌ಡಿಆರ್‌ಎಫ್ ಮತ್ತು ಇತರ ಏಜೆನ್ಸಿಗಳ ೪೦ ತಂಡಗಳನ್ನು ಶೋಧ ಕಾರ್ಯಾಚರಣೆಗಾಗಿ ನಿಯೋಜಿಸಲಾಗಿದ್ದು, ಭೂಕುಸಿತ ಪ್ರದೇಶವನ್ನು ಆರು ವಲಯಗಳಾಗಿ ವಿಂಗಡಿಸಲಾಗಿದೆ. ಮಲಪ್ಪುರಂ ಜಿಲ್ಲೆಯ ಎಡಕ್ಕರ ಮತ್ತು ನಿಲಂಬೂರಿನ ಮೂರು ಸೇರಿದಂತೆ ಚಲಿಯಾರ್ ನದಿಯಲ್ಲಿ ಕೊಚ್ಚಿಹೋಗಿದ್ದ ಅವಶೇಷಗಳಿಂದ ೧೪ ಮೃತದೇಹಗಳನ್ನು ನಿನ್ನೆ

ಹೊರತೆಗೆಯಲಾಗಿತ್ತು. ಇದುವರೆಗೂ ವಯನಾಡ್‌ನಲ್ಲಿ ಸಂಭವಿಸಿದ ಭೂಕುಸಿತದಲ್ಲಿ ೩೦೦ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದಾರೆ ಎಂದು ವರದಿಯಾಗಿದೆ. ೧೭ ಪರಿಹಾರ ಶಿಬಿರಗಳಲ್ಲಿ ೨ ಸಾವಿರದ ೫೦೦ಕ್ಕೂ ಹೆಚ್ಚು ಜನರಿಗೆ ಆಶ್ರಯ ಕಲ್ಪಿಸಲಾಗಿದೆ.

**********

ಆರು ರಾಜ್ಯಗಳಾದ್ಯಂತ ಪಶ್ಚಿಮ ಘಟ್ಟಗಳ ೫೬ ಸಾವಿರದ ೮೦೦ ಚದರ ಕಿಲೋಮೀಟರ್‌ಗಳನ್ನು ಪರಿಸರ ಸೂಕ್ಷ್ಮ ಪ್ರದೇಶ ಎಂದು ಘೋಷಿಸಲು ಕೇಂದ್ರ ಸರ್ಕಾರ ಹೊಸ ಕರಡು ಅಧಿಸೂಚನೆ ಹೊರಡಿಸಿದೆ. ಗುಜರಾತ್, ಮಹಾರಾಷ್ಟ್ರ, ಗೋವಾ, ಕರ್ನಾಟಕ, ಕೇರಳ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಮುಂದಿನ ೬೦ ದಿನಗಳಲ್ಲಿ ಸಾರ್ವಜನಿಕರಿಂದ ಸಲಹೆ ಮತ್ತು ಆಕ್ಷೇಪಣೆಗಳನ್ನು ಸರ್ಕಾರ ಆಹ್ವಾನಿಸಿದೆ. ಜನರು ತಮ್ಮ ಸಲಹೆಗಳನ್ನು ಮತ್ತು ಆಕ್ಷೇಪಣೆಗಳನ್ನು **esz-mef@nic.in** ನಲ್ಲಿ ಇಮೇಲ್ ಮಾಡಬಹುದುಪರಿಸರ ಸೂಕ್ಷ್ಮ ಪ್ರದೇಶವೆಂದು ಘೋಷಿಸಿದ ನಂತರ, ಈ ಪ್ರದೇಶಗಳಲ್ಲಿ ಕಲ್ಲುಗಣಿಗಾರಿಕೆ, ಗಣಿಗಾರಿಕೆ ಮತ್ತು ದೊಡ್ಡ ಮೂಲಸೌಕರ್ಯ ಅಭಿವೃದ್ಧಿಯಂತಹ ಆರ್ಥಿಕ ಚಟುವಟಿಕೆಗಳ ಮೇಲೆ ನಿರ್ಬಂಧವಿರುತ್ತದೆ.

**********

೨೦೨೪-೨೫ರ ಜುಲೈ ೩೧ರ ವರೆಗೆ ದಾಖಲೆಯ ಏಳು ಕೋಟಿ ೨೮ ಲಕ್ಷ ಆದಾಯ ತೆರಿಗೆ ಮರು ಪಾವತಿಸಲಾಗಿದೆ. ಕಳೆದ ವರ್ಷ ಜುಲೈ ೩೧ ರವರೆಗೆ ಸಲ್ಲಿಸಿದ ೨೦೨೩-೨೪ರ ವರ್ಷದ ಮೌಲ್ಯಮಾಪನಕ್ಕೆ ಹೋಲಿಸಿದರೆ ಒಟ್ಟು ಐಟಿಆರ್‌ಗಳಿಗಿಂತ ಇದು ಶೇಕಡ ೭.೫ರಷ್ಟು ಹೆಚ್ಚು ಎಂದು ಹಣಕಾಸು ಸಚಿವಾಲಯ ತಿಳಿಸಿದೆ. ಹೆಚ್ಚುತ್ತಿರುವ ತೆರಿಗೆದಾರರು ಈ ವರ್ಷ ಹೊಸ ತೆರಿಗೆ ಪದ್ಧತಿಯನ್ನು ಆರಿಸಿಕೊಂಡಿದ್ದಾರೆ. ೨೦೨೪-೨೫ರ ಮೌಲ್ಯಮಾಪನ ವರ್ಷಕ್ಕೆ ಸಲ್ಲಿಸಿದ ಒಟ್ಟು ೭.೨೮ ಕೋಟಿ ಆದಾಯ ತೆರಿಗೆ ಮರು ಪಾವತಿಗಳಲ್ಲಿ ಹಳೆಯ ತೆರಿಗೆ ಪದ್ಧತಿಯಲ್ಲಿ ಸಲ್ಲಿಸಲಾದ ೨.೦೧ ಕೋಟಿ ಐಟಿಆರ್‌ಗಳಿಗೆ ಹೋಲಿಸಿದರೆ ೫.೨೭ ಕೋಟಿ ಐಟಿಆರ್‌ಗಳನ್ನು ಹೊಸ ತೆರಿಗೆ ಪದ್ಧತಿಯಲ್ಲಿ ಸಲ್ಲಿಸಲಾಗಿದೆ. ಶೇಕಡ ೭೨ರಷ್ಟು ತೆರಿಗೆದಾರರು ಹೊಸ ತೆರಿಗೆ ಪದ್ಧತಿಯನ್ನು ಆಯ್ಕೆ ಮಾಡಿಕೊಂಡಿದ್ದರೆ, ಶೇಕಡ ೨೮ರಷ್ಟು ಜನರು ಹಳೆಯ ತೆರಿಗೆ ಪದ್ಧತಿಯಲ್ಲಿ ಮುಂದುವರಿದಿದ್ದಾರೆ. ಈ ವರ್ಷ ಜುಲೈ ೩೧ ರಂದು ಒಂದೇ ದಿನದಲ್ಲಿ ೬೯.೯೨ ಲಕ್ಷ ಐಟಿಆರ್‌ಗಳನ್ನು ಸಲ್ಲಿಸುವ ಮೂಲಕ ಐಟಿಆರ್‌ಗಳ ಫೈಲಿಂಗ್ ಗರಿಷ್ಠ ಮಟ್ಟ ತಲುಪಿದೆ. ಮೊದಲ ಬಾರಿ ಸಲ್ಲಿಸುವವರಿಂದ ಜುಲೈ ೩೧ ರವರೆಗೆ ಇಲಾಖೆಯು ೫೮.೫೭ ಲಕ್ಷ ಐಟಿಆರ್‌ಗಳನ್ನು ಸ್ವೀಕರಿಸಿದೆ, ಇದು ತೆರಿಗೆ ಮೂಲವನ್ನು ವಿಸ್ತರಿಸುವ ನ್ಯಾಯೋಚಿತ ಸೂಚನೆಯಾಗಿದೆ.

**********

ಎಂಟು ರಾಷ್ಟ್ರೀಯ ಹೈಸ್ಪೀಡ್ ರೋಡ್ ಕಾರಿಡಾರ್ ಯೋಜನೆಗಳನ್ನು ೫೦ ಸಾವಿರ ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲು ಕೇಂದ್ರ ಸಚಿವ ಸಂಪುಟದ ಅನುಮೋದನೆ ದೊರೆತಿದೆ. ಇದು ದೇಶದ ಆರ್ಥಿಕ ಬೆಳವಣಿಗೆಯ ಮೇಲೆ ಗುಣಾತ್ಮಕ ಪರಿಣಾಮ ಬೀರುತ್ತದೆ ಮತ್ತು ಉದ್ಯೋಗಾವಕಾಶಗಳನ್ನು ಹೆಚ್ಚಿಸುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಆರ್ಥಿಕ ವ್ಯವಹಾರಗಳ ಕ್ಯಾಬಿನೆಟ್ ಸಮಿತಿಯು ಒಟ್ಟು ೫೦ ಸಾವಿರದ ೬೫೫ ಕೋಟಿ ರೂಪಾಯಿ ವೆಚ್ಚದಲ್ಲಿ ೯೩೬ ಕಿಲೋಮೀಟರ್ ಉದ್ದದ ಎಂಟು ಪ್ರಮುಖ ರಾಷ್ಟ್ರೀಯ ಹೈಸ್ಪೀಡ್ ರೋಡ್ ಕಾರಿಡಾರ್ ಯೋಜನೆಗಳಿಗೆ ಅನುಮೋದನೆ ನೀಡಿತ್ತು. ನವದೆಹಲಿಯಲ್ಲಿ ಮಾಧ್ಯಮಗಳಿಗೆ ಮಾಹಿತಿ ನೀಡಿದ ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್, ಈ ಯೋಜನೆಗಳು ಭಾರತದ ೨೦೪೭ದೃಷ್ಟಿಗೆ ಅನುಗುಣವಾಗಿವೆ ಎಂದು ಹೇಳಿದರು.

**********

ಕೇಂದ್ರ ಆರೋಗ್ಯ ಕಾರ್ಯದರ್ಶಿ ಅಪೂರ್ವ ಚಂದ್ರ ಅವರು ಒಂಬತ್ತುಕ್ಕೂ ಹೆಚ್ಚು ರಾಜ್ಯಗಳಲ್ಲಿ ಡೆಂಘಿ ತಡೆಗಟ್ಟುವಿಕೆ, ನಿಯಂತ್ರಣ ಮತ್ತು ನಿರ್ವಹಣೆಗಾಗಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಸನ್ನದ್ಧತೆಯನ್ನು ಪರಿಶೀಲಿಸಲು ಉನ್ನತ ಮಟ್ಟದ ಸಭೆ ನಡೆಸಿದರು. ಸಭೆಯಲ್ಲಿ, ದೇಶದಲ್ಲಿ ಡೆಂಘಿ ಸಾವಿನ ಪ್ರಮಾಣ ೧೯೯೬ ರಲ್ಲಿ ಶೇಕಡ ೩.೩ ರಿಂದ ೨೦೨೪ ರಲ್ಲಿ ಶೇಕಡ ೦.೧೭ ಕ್ಕೆ ಕಡಿಮೆಯಾಗಿದೆ. ಹಾಟ್‌ಸ್ಪಾಟ್‌ಗಳನ್ನು ಗುರುತಿಸುವುದು, ವೆಕ್ಟರ್ ಕಣ್ಗಾವಲು ಹೆಚ್ಚಿಸುವುದು ಮತ್ತು ತಡೆಗಟ್ಟುವ ಕ್ರಮಗಳನ್ನು ಕೈಗೊಳ್ಳಲು ಪ್ರಕರಣಗಳ ಜಿಯೋಟ್ಯಾಗ್ ಮಾಡಬೇಕು ಎಂದು ಅವರು ಸಲಹೆ ಮಾಡಿದರು. ಸಭೆಯಲ್ಲಿ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ ಹಾಗೂ ದೆಹಲಿ, ಗುಜರಾತ್, ಕರ್ನಾಟಕ, ಮಹಾರಾಷ್ಟ್ರ, ರಾಜಸ್ಥಾನ, ತಮಿಳುನಾಡು, ತೆಲಂಗಾಣ, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳದ ಒಂಬತ್ತು ರಾಜ್ಯಗಳ ಕಾರ್ಯದರ್ಶಿಗಳು ಮತ್ತು ಉನ್ನತ ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

**********

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ, ೭ನೇ ದಿನವಾದ ನಿನ್ನೆ ಭಾರತಕ್ಕೆ ಶುಭ ಶುಕ್ರವಾರವಾಗಿ ಪರಿಣಮಿಸಿತು, ವಿವಿಧ ಕ್ರೀಡಾ ವಿಭಾಗಗಳಲ್ಲಿ ದೇಶ ಗೆಲುವುಗಳನ್ನು ದಾಖಲಿಸಿದೆ. ಬ್ಯಾಡ್ಮಿಂಟನ್‌ನಲ್ಲಿ, ಲಕ್ಷ್ಯಸೇನ್ ಒಲಿಂಪಿಕ್ಸ್‌ನಲ್ಲಿ ಪುರುಷರ ಸಿಂಗಲ್ಸ್ ಸೆಮಿಫೈನಲ್ ಪ್ರವೇಶಿಸಿದ ಮೊದಲ ಭಾರತೀಯ ಷಟ್ಲರ್ ಎಂಬ ಇತಿಹಾಸ ಬರೆದಿದ್ದಾರೆ. ಕಳೆದ ರಾತ್ರಿ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ ಲಕ್ಷ್ಯಸೇನ್ ೧೨ನೇ ಶ್ರೇಯಾಂಕದ ಚೈನೀಸ್ ತೈಪೆಯ, ಚೌ ಟಿಯೆನ್ ಚೆನ್ ಅವರನ್ನು ೧೯-೨೧, ೨೧-೧೫, ೨೧-೧೨ ಸೆಟ್‌ಗಳಿಂದ ಸೋಲಿಸಿದರು. ಶೂಟಿಂಗ್‌ನಲ್ಲಿ, ಮನುಭಾಕರ್ ಮಹಿಳೆಯರ ೨೫ ಮೀಟರ್ ಪಿಸ್ತೂಲ್ ಸ್ಪರ್ಧೆಯ ಫೈನಲ್‌ಗೆ ಮುನ್ನಡೆದರು, ಅವರು ಅರ್ಹತಾ ಸುತ್ತಿನಲ್ಲಿ ಒಟ್ಟಾರೆ ೫೯೦ ಅಂಕಗಳೊಂದಿಗೆ ಎರಡನೇ ಸ್ಥಾನ ಗಳಿಸಿದರು. ಈಗ ಅವರು ತಮ್ಮ ಮೂರನೇ ಒಲಿಂಪಿಕ್ಸ್ ಪದಕದ ಮೇಲೆ ಕಣ್ಣಿಟ್ಟಿದ್ದಾರೆ.

ಪುರುಷರ ಹಾಕಿಯಲ್ಲಿ, ಭಾರತ ಕ್ವಾರ್ಟರ್‌ಫೈನಲ್ ಪಂದ್ಯಕ್ಕೆ ಮುನ್ನ ತನ್ನ ಗುಂಪು ಹಂತದ ಕೊನೆಯ ಪಂದ್ಯದಲ್ಲಿ ಆಸ್ಟ್ರೇಲಿಯಾ ವಿರುದ್ಧ ೩-೨ ಅಂತರದ ಐತಿಹಾಸಿಕ ಗೆಲುವು ದಾಖಲಿಸಿತು. ಭಾರತ ತಂಡ ಈಗಾಗಲೇ ಕೊನೆಯ ಎಂಟರ ಘಟ್ಟ ತಲುಪಿದೆ. ೫೨ ವರ್ಷಗಳ ಹಿಂದೆ ೧೯೭೨ರ ಮ್ಯೂನಿಚ್ ಒಲಿಂಪಿಕ್ಸ್ ನಂತರ ಹಾಕಿಯಲ್ಲಿ ಆಸ್ಟ್ರೇಲಿಯಾ ವಿರುದ್ಧ ಭಾರತಕ್ಕೆ ಇದು ಮೊದಲ ಜಯವಾಗಿದೆ. ನಾಳೆ ನಡೆಯಲಿರುವ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಭಾರತ ತಂಡ, ಗ್ರೇಟ್ ಬ್ರಿಟನ್ ವಿರುದ್ಧ ಸೆಣಸಲಿದೆ. ಬಿಲ್ಲುಗಾರಿಕೆಯಲ್ಲಿ, ಧೀರಜ್ ಬೊಮ್ಮದೇವರ ಮತ್ತು ಅಂಕಿತಾ ಭಕತ್ ಅವರ ಮಿಶ್ರ ತಂಡ, ಫೈನಲ್‌ನಲ್ಲಿ ನಾಲ್ಕನೇ ಸ್ಥಾನ ಗಳಿಸಿ, ಕಂಚಿನ ಪದಕ ವಂಚಿತವಾಯಿತು. ಆದರೂ ಇದು, ಈ ಕ್ರೀಡಾಕೂಟದ ಆರ್ಚರಿಯಲ್ಲಿ, ಭಾರತದ ಅತ್ಯುತ್ತಮ ಫಲಿತಾಂಶವಾಗಿದೆ. ಅಮೆರಿಕದ ಬ್ರಾಡಿ ಎಲಿಸನ್ ಮತ್ತು ಕೇಸಿ ಕೌಫೋಲ್ಡ್ ಜೋಡಿ ವಿರುದ್ಧದ ಪಂದ್ಯದಲ್ಲಿ, ಭಾರತ ತಂಡ ೬-೨ ಅಂತರದಲ್ಲಿ ಸೋತು, ಐತಿಹಾಸಿಕ ಪದಕದಿಂದ ವಂಚಿತವಾಯಿತು. ಅಥ್ಲೆಟಿಕ್ಸ್‌ನಲ್ಲಿ ಪಾರುಲ್ ಚೌಧರಿ ಮತ್ತು ಅಂಕಿತಾ ಧ್ಯಾನಿ, ಮಹಿಳೆಯರ ೫ ಸಾವಿರ ಮೀಟರ್ ಓಟದ ಅಂತಿಮ ಸುತ್ತಿಗೆ ಅರ್ಹತೆ ಪಡೆಯುವಲ್ಲಿ ವಿಫಲರಾದರು. ತಜಿಂದರ್‌ಪಾಲ್ ಸಿಂಗ್ ತೂರ್ ಕೂಡ ಪುರುಷರ ಶಾಟ್‌ಪುಟ್ ಫೈನಲ್‌ಗೆ ಅರ್ಹತೆ ಪಡೆಯುವಲ್ಲಿ ವಿಫಲರಾದರು.ಇಂದು ಭಾರತವು ಶೂಟಿಂಗ್‌ನಲ್ಲಿ ಮನು ಭಾಕರ್, ಬಿಲ್ಲುಗಾರಿಕೆಯಲ್ಲಿ ದೀಪಿಕಾ ಕುಮಾರಿ ಮತ್ತು ಭಜನ್ ಕೌರ್ ಮತ್ತು ನಿಶಾಂತ್ ದೇವ್ ಬಾಕ್ಸಿಂಗ್‌ನಲ್ಲಿ ಪದಕಗಳ ಬೇಟೆಯನ್ನು ಮುಂದುವರೆಸಲಿದ್ದಾರೆ. ಭಾರತೀಯ ಅಥ್ಲೀಟ್‌ಗಳು ಗಾಲ್ಫ್ ಮತ್ತು ಸೈಲಿಂಗ್‌ನಲ್ಲಿಯೂ ಸ್ಪರ್ಧಿಸಲಿದ್ದಾರೆ.

**********

ಕೇಳುಗರ ಗಮನಕ್ಕೆ ....

ಪ್ಯಾರಿಸ್‌ನಲ್ಲಿ ನಡೆಯುತ್ತಿರುವ ಒಲಿಂಪಿಕ್ಸ್ ಕ್ರೀಡಾಕೂಟದ ಪ್ರಸಾರದ ಹಿನ್ನಲೆಯಲ್ಲಿ ಬೆಳಿಗ್ಗೆ ೭-೩೫ ಕ್ಕೆ ಪ್ರಸಾರವಾಗುತ್ತಿದ್ದ ರಾಷ್ಟ್ರೀಯ ವಾರ್ತೆಗಳು ಇದೇ ತಿಂಗಳ ೧೧ ರವರೆಗೆ ಬೆಳಗ್ಗೆ ೯ ಗಂಟೆ ೫ ನಿಮಿಷಕ್ಕೆ ಪ್ರಸಾರವಾಗಲಿದೆ.

**********